ಇಂಗಿತವನ್ನ ಅರಿತುಕೊಂಡೋ ಏನೋ, ಒಂದೆರಡು ವರ್ಷಗಳ ಅವಧಿಯಲ್ಲಿ ಇವರೊಂದಿಗೆ ನನ್ನ ಮದುವೆ ಮಾಡಿಸಿಬಿಟ್ಟರು. ಇವರೆಷ್ಟು ಜಾಣರು... ಕೂಡಿಡುವ ಬುದ್ಧಿ ಇರುವವರು... ನನ್ನ ಮೇಲೆ ಪ್ರೀತಿ ಇಟ್ಟುಕೊಂಡಿದ್ದವರು... ಪ್ರಸ್ತದ ರಾತ್ರಿ, ಜೋಡಿ ಓಲೆಗಳನ್ನ ಉಡುಗೊರೆಯಾಗಿ ಕೊಟ್ಟಾಗ ನನ್ನ ಕಣ್ಣುಗಳು ಧನ್ಯತೆಯಿಂದ ತುಂಬಿಕೊಂಡುಬಿಟ್ಟವು! ವಸುಂಧರಮ್ಮನ ಮುಖ ಅವರಿಗೆ ಅರಿವಿಲ್ಲದೆಯೇ ಅರಳಿತು.

ಜನಾರ್ದನನಿಗೆ ಆಗ ಎರಡು ವರ್ಷ ತುಂಬಿತ್ತು. ಗುಬ್ಬಿಯ ಅಕ್ಕಿಮಂಡಿ ಮುಚ್ಚಿಹೋಗಿ, ಇವರಿಗೆ ಕೆಲಸವಿಲ್ಲದಂತೆ ಆಯಿತು. ಆಗಲೇ ಬೆಂಗಳೂರಿಗೆ ಬರೋ ಆಲೋಚನೆ ಮಾಡಿದ್ದು. ವಿಜಯನಗರದಲ್ಲಿ ಶಾರದಕ್ಕ ನೆಲೆಸಿದ್ದರು. ಬೆಂಗಳೂರಿನಲ್ಲಿ ನಮ್ಮ ಪರಿಚಯದವರೆಂದರೆ ಆಗ ಅವರೊಬ್ಬರೇ ಅಲ್ಲವೇ? ಅವರ ಮನೆಗೇ ಬಂದು ಒಂದು ತಿಂಗಳು ಉಳಿದುಕೊಂಡೆವು. ಅಷ್ಟರಲ್ಲಿ ಇವರು ಕೆ.ಆರ್. ಪುರದ ಎರಡು ಅಕ್ಕಿಮಂಡಿಗಳಲ್ಲಿ ಲೆಕ್ಕ ಬರೆಯುವ ಕೆಲಸ ಹಿಡಿದರು. ಶಾರದಕ್ಕನ ಮನೆಯ ಹಿಂಬದಿಯ ಬೀದಿಯಲ್ಲೇ ಸುಬ್ಬಣ್ಣನವರ ವಠಾರದಲ್ಲಿ ಸಣ್ಣ ಮನೆ ಬಾಡಿಗೆಗೆ ಹಿಡಿದು ಹೋದೆವು. ಎರಡೆರಡು ವರ್ಷಗಳ ಅಂತರದಲ್ಲಿ ಪುನಃ ಎರಡು ಸಲ ಬಸುರಿಯಾಗಿದೆ. ಎಷ್ಟು ಮುಂದಾಲೋಚನೆ ಇರೋರು ಇವರು? ಜನಾರ್ದನ ಹೊಟ್ಟೆಯಲ್ಲಿದ್ದಾಗಲೂ ಅಷ್ಟೆ, ಗಿರಿಧರ, ಲಕ್ಷ್ಮಿಯರು ಹೊಟ್ಟೆಯಲ್ಲಿದ್ದಾಗಲೂ ಅಷ್ಟೆ... ಹೆರಿಗೆ ಹಾಗೂ ಬಾಣಂತನಗಳಿಗೆ ಹಣ ಬೇಕಾಗುತ್ತೆ ಅಂತ ಬಸುರಿ ಅಂತ ಗೊತ್ತಾದ ದಿನದಿಂದಲೂ ದುಡ್ಡು ಕೊಟ್ಟಿಡೋಕ್ಕೆ ಶುರು ಮಾಡ್ತಿದ್ದರು. ಮೂರೂ ಹೆರಿಗೆ, ಬಾಣಂತನಗಳೂ ಯಾವುದೇ ಕಷ್ಟವಿಲ್ಲದೆ ಆಯಿತಲ್ಲ.. ಮೊದಲ ಹೆರಿಗೆ ತವರಿನಲ್ಲಿ ಆದರೂ... ಬಹಳಾ ಲೆಕ್ಕಾಚಾರದ ಮನುಷ್ಯ! ಏನೋ ಲಹರಿ ಬಂದು ಒಂದಿನ ಕೋಸಂಬರಿಯೋ, ಸಜ್ಜಿಗೆಯೋ ಮಾಡಿದರೆ, 'ಯಾಕೆ ಇಷ್ಟು ಖರ್ಚು ಮಾಡ್ತೀಯ? ನಾಳೆ ದಿನ

